<u>ಎರಡನೇ ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು,ಗೋಕಾಕ ಇವರ ನ್ಯಾಯಾಲಯ,ಗೋಕಾಕ</u>

<u>ಸಿ.ಸಿ.ನಂಬರ.**5215/2019**</u>

<u>ದೋಷಾರೋಪಣೆ</u>

ನಾನು, ರೂಪಾ ಮಟ್ಟಿ,
ಬಿ.ಎಸ್.ಸಿ ಎಲ್ಎಲ್.ಎಮ್.,
ಎರಡನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಮ್ಎಫ್‌ಸಿ,ಗೋಕಾಕ.

ಆರೋಪಿತರ ಹೆಸರುಃ
1) ರುದ್ರಪ್ಪ ಮಹಾದೇವ ಗೌಡನವರ @ ಪಾಟೀಲ
ವಯಸ್ಸುಃ 56 ವರ್ಷ, ಉದ್ಯೋಗಃ ನಿವೃತ್ತಿ ಮಿಲ್ಟ್ರಿ
2) ರವೀಂದ್ರ ರುದ್ರಪ್ಪ ಗೌಡನವರ @ ಪಾಟೀಲ
ವಯಸ್ಸುಃ 28 ವರ್ಷ, ಉದ್ಯೋಗಃ ಖಾಸಗಿ ನೌಕರಿ,
3) ಶಿವಲೀಲಾ ರುದ್ರಪ್ಪ ಗೌಡನವರ @ ಪಾಟೀಲ
ವಯಸ್ಸುಃ 54 ವರ್ಷ, ಉದ್ಯೋಗಃ ಮನೆಕೆಲಸ,
4) ಸಂಗೀತಾ ರುದ್ರಪ್ಪ ಗೌಡನವರ @ ಪಾಟೀಲ
ವಯಸ್ಸುಃ 26 ವರ್ಷ, ಉದ್ಯೋಗಃ ಖಾಸಗಿ ನೌಕರಿ,
ಎಲ್ಲರೂ, ಸಾಃ ಕೊ-ಶಿವಾಪೂರ, ತಾಃ ಗೋಕಾಕ.

<u>ನಿಮ್ಮ ಮೇಲೆ ಹೊರೆಸುವ ದೊಷಾರೋಪಣೆ ಏನೆಂದರೆ:</u>

ದಿನಾಂಕಃ 16-06-2019 ರಂದು ಸಾಯಂಕಾಲ 4-00 ಗಂಟೆ ಸುಮಾರಿಗೆ ಗೋಕಾಕ ಗ್ರಾಮೀಣ ಪೊಲೀಸ ಠಾಣೆಯ ವ್ಯಾಪ್ತಿಯಲ್ಲಿರುವ ಬರುವ ಕೊ ಶಿವಾಪೂರ ಗ್ರಾಮದ ಹದ್ದಿಯಲ್ಲಿ ಚಾಸಾ-1 ರವರ ಮತ್ತು ಆರೋಪಿ ನಂ.1 ರವರು ಸಹೋದರರು ಇದ್ದು, ಇವರ ನಡುವೆ ಜಮೀನ ಪಾಲಿನ ಸಲುವಾಗಿ ತಂಟೆ ತಕರಾರು ಇದ್ದು ಚಾಸಾ-1 ರವರು 1 ನೇ ಆರೋಪಿತನ ಜಮೀನದಲ್ಲಿ ಒಂದು ಬಾಳೆ ಗೊಣೆಯನ್ನು ಕಡಿದು ದೇವರಿಗೆ ಪೂಜೆ ಮಾಡಿದ್ದು, ಇದರಿಂದ ಆರೋಪಿತರಾದ ನೀವು ಸಿಟ್ಟಾಗಿ ಬಂದು ಚಾಸಾ-1 ರವರಿಗೆ ಕೈಯಿಂದ ಬಡಿದು ಸಾದಾ ಗಾಯಪಡಿಸಿ ಅಪರಾಧ ಕಲಂ 323 ಸಹ ಕಲಂ 34 ಐಪಿಸಿ ರಡಿ ಅಪರಾಧ ಮಾಡಿರುವಿರಿ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ನೇ ಆರೋಪಿತನಾದ ನೀನು ಮೇಲೆ ಹೇಳಿದ ವಿಷಯಕ್ಕೆ ಸಂಬಂಧಪಟ್ಟಂತೆ ಬಡಿಗೆಯಿಂದ ಚಾಸಾ-1 ರವರ ಬೆನ್ನಿಗೆ ಬಡಿದು ಸಾದಾ ಗಾಯಪಡಿಸಿ ಕಲಂ.324 ಸಹಕಲಂ 34 ರಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧವನ್ನು ಸಮಾನ ಉದ್ದೇಶದಿಂದ ಮಾಡಿರುವಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಮೇಲೆ ಹೇಳಿದ ವಿಷಯಕ್ಕೆ ಸಂಬಂಧಪಟ್ಟಂತೆ ಚಾಸಾ-4 ರವರಿಗೆ " ಬೋಸಡಿ ಹಾದರಗಿತ್ತಿ ನಮ್ಮ ಜಮೀನದಲ್ಲಿ ಬಾಳೆ ಗೊಣೆಯನ್ನು ಯಾಕೆ ಕಡಿದಿರುತ್ತಿ " ಅಂತಾ ಅವಾಚ್ಯ ಶಬ್ದಗಳಿಂದ ಬೈದು ಕಲಂ.504 ಸಹಕಲಂ 34 ರಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧವನ್ನು ಸಮಾನ ಉದ್ದೇಶದಿಂದ ಮಾಡಿರುವಿ.

ಪ್ರಃ **1 :** ನಿಮಗೆ ಮೇಲೆ ಓದಿ ಹೇಳಿದ ಆಪಾದನೆ ತಿಳಿಯಿತೆ**?**

ಉ :

ಪ್ರಃ **2 :** ನೀವು ಗುನ್ಹಾ ಕಬೂಲಿ ಆಗುವಿಯೋ ಅಥವಾ ವಿಚಾರಣಾ ಆಗಬೇಕೋ?

ಉ :

**( ಮೇಲಿನ ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವನಿಂದ ಬಂದ ಉತ್ತರಗಳನ್ನು ನನ್ನ ಸ್ವ ಅಕ್ಷಗಳಲ್ಲಿ ಬರೆದುಕೊಂಡೆ ಅಂತಾ ದೃಢೀಕರಸುತ್ತೇನೆ)**

ದಿಃ 14-10-2022 2 ನೇ ಹೆಚ್ಚುವರಿ ದಿ.ನ್ಯಾದಂ., ಗೋಕಾಕ.